ನೆರಿಯಾಗಿ ಕೆಲಸಮಾಡಬಹುದೆಂಬ ನಂಬಿಕೆ ಇದೆ. ಆಗ ಬಹುಶಃ ತೊಂದರೆ ಇರುವುದಿಲ್ಲ. ಈಗ ಹಕ್ಕುದಾರಿ ಶಾನುಭೋಗರಿರುವುದರಿಂದ ರೈತರಿಗೆ ತೊಂದರೆಯಾಗಿದೆ. ಮುಂದೆ ಬರುವ ಹೊಸಬರಿಂದ ಬಹುಶಃ ತೊಂದರೆ ಇರುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ದಾಖಲೆಗಳು ಬಹಳ ಮುಖ್ಯವಾಗಿ ಬೇಕಾಗಿರುವುದರಿಂದ ತಾಲ್ಲೂಕಾಫೀಸಿನಲ್ಲೇ ಅವನ್ನಿಟ್ಟು ಅಲ್ಲೇ ಶಾನುಭೋಗರು ಹೋಗಿ ಬರೆಯಬೇಕೆಂದು ಹೇಳುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ತಾಲ್ಲೂಕಾಫೀಸಿನಲ್ಲಿಡಬಾರದು, ಶಾನುಭೋಗರ ಕೈಗೆ ಕೊಡಬೇಕು ಎಂದು ಈಗ ತೀರ್ಮಾನವಾಗಿದೆ.

ಶ್ರೀ ಗಾಂಜಿ ವೀರಪ್ಪ.—ಶಾನುಭೋಗರಿಂದ ಜಾಗ್ರತೆ ಬೇಕಾದ ಸಮಾಚಾರ ದೊರೆಯದೆ ಅನೇಕವಾಗಿ ಜನರಿಗೆ ತೊಂದರೆಯಾಗುವುದರಿಂದ ತಾಲ್ಲೂಕಾಫೀಸಿನಲ್ಲೇ ಈ ರಿಕಾರ್ಡುಗಳನ್ನೆಲ್ಲಾ ಇಡುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ನೋಡಿ ಹಿಂದೆ ತಾಲ್ಲೂಕು ಆಫೀಸಿನಲ್ಲೇ ಇಟ್ಟಿತ್ತು. ಈಗ ಬಾಂಬೆ ಪದ್ಧತಿ ಜಾರಿಗೆ ತರಲು ನಿರ್ಣಯವಾಗಿದೆ. ಬಹುಶಃ ಮುಂದೆ ನಯಾ ಶಾನುಭೋಗರು ಬಂದಮೇಲೆ ಅವರಿಗೆ ಹೆಚ್ಚು ಜವಾಬ್ದಾರಿ ಇರುವುದರಿಂದ ಅವರನ್ನು ಬೇರೆ ಕಡೆಗೆ ವರ್ಗಮಾಡಬಹುದೆಂಬ ಭಯವಿರುವುದರಿಂದ ಎಲ್ಲಾ ಸರಿಹೋಗಬಹುದು.

ಶ್ರೀ ಎಸ್. ವಿ. ರಾಮೇಗೌಡ.—ಹಳೆಯ ಶಾನುಭೋಗರು ಹೋಗಬೇಕಾದರೆ ಇನ್ನೂ ಎಷ್ಟು ವರ್ಷ ಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಸುಪ್ರೀಂಕೋರ್ಟ್ ತೀರ್ಮಾನವಾಗುವವರೆಗೂ ಏನೂ ಮಾಡುವ ಹಾಗಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಹೊಸ ಪದ್ಧತಿಯನ್ನು ಜಾಗ್ರತೆ ಜಾರಿಗೆ ತರಲು ಸಾಧ್ಯವಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸುಪ್ರೀಂ ಕೋರ್ಟಿನಲ್ಲಿ ನಾವು ಕೇಸು ಗೆಲ್ಲುವುದು ನಿಜ, ಅದು ಬೇಗ ಇತ್ಯರ್ಥವಾಗಬಹುದು, ಆದುದರಿಂದ ಇರುವುದನ್ನು ಮುಂದುವರಿಸುತ್ತಿದ್ದೇವೆ.

T. A. And D. A. Paid to the Prosecution witnesses in Several Areas of the State

*Q.— 182, Sri S. GOPALA SALENNA (Mudabidri).—

Will the Government be pleased to state:—

(*a*) the rates of T.A. and D.A. paid to the prosecution witnesses in the old Madras and old Bombay areas of Mysore State at the time of integration ;

(*b*) the rates of T.A. and D.A. paid to the prosecution witnesses at present in the State ;

(*c*) whether they are aware that the prosecution witnesses cannot meet their expenses under the new uniform rates of T.A. and D.A. allowed at present under the increasing high cost of living ?

A.—Sri M. V. RAMA RAO (Minister for Law).—

(*a*) The rates of T.A. and D.A. in the Bombay area were as follows :—

Rates of T. A.

(1) *When the journey is by road* :—The actual expenses incurred, provided the same be reasonable.

(SRI M. V. RAMA RAO)

(2) *When the journey is wholly or partly by rail or steamer :—* Second class or third class railway or steamer fare depending upon the status of the witness. First class fare was given in the most exceptional cases only for reasons to be recorded in writing.

Rates of D. A.

These varied from Rs. 0-14-0 to Rs. 2-8-0 depending upon the status of the witness.

In the Madras Area the rates :

T.A. and D.A. were as follows :—The official witnesses were being paid T.A. and D.A. at different rates depending upon the class to which they belonged. The Daily Allowance ranged from 0-25 p. to Rs. 10-50p. The T.A. varied from 0-12 p. to 0-56 p. per mile for road mileage. The railway fare and steamer fare varied from single III callss fare to single I class fare.

As regards non-official witnesses also, they depended on the status of the witness. Railway fare varied from third class to first class. Actual fare was paid for journeys by public motor service, by sea by sea or by canal. If the journey was made by road otherwise than by by public motor service, T. A. varied from Re. 0-0-6 to 0-2-0 per mile The rate of subsistence allowance was Rs. 2 per day for all classes of witnesses.

(*b*)— **T. A.**

(1) When the journey is by road—actual exepenses incurred, provided the same is reasonable ;

(2) When a journey is by rail or steamer or partly by rail and steamer, it varies from III class to I class depending upon the status of the witness. First Class is allowed only in exceptional cases for reasons to be recorded in writing.

D. A.

The rate of D. A. varies from 0-75 p. per day to Rs. 2-50 p. per day depending upon the status of the witnesses.

(*c*) No.

ಶ್ರೀ ಎಸ್. ಗೋಪಾಲ ಸಾಲೆನ್ನ—ಬೊಂಬಾಯಿ ಭಾಗದಲ್ಲಿ 14 ಆಣೆಯಿಂದ ಎರಡೂವರೆ ರೂಪಾಯಿವರೆಗೂ ದಿನಭತ್ಯವಿತ್ತು, ಮದ್ರಾಸಿನಲ್ಲಿ 25 ಪೈಸೆಯಿಂದ ಹತ್ತೂವರೆ ರೂಪಾಯಿ ವರೆಗೂ ಇತ್ತು. ಈಗ ಏಕರೂಪತೆಯನ್ನು ತರಲು 75 ಪೈಸೆಯಿಂದ ಎರಡೂವರೆ ರೂಪಾಯಿ ವರೆಗೂ ಮಾಡಿದ್ದೇವೆಂದು ಹೇಳಿದೆ. ಇವತ್ತಿನ ಧಾರಣೆ ಪರಿಸ್ಥಿತಿಯನ್ನು ಅನುಸರಿಸಿ ಖರ್ಚು ಆಗುವುದನ್ನು ನೋಡುವಾಗ 75 ಪೈಸೆ ಭತ್ಯಕ್ಕೆ ಯಾವ ಸಾಕ್ಷಿ ಸಿಕ್ಕುತ್ತಾರೆ ಸ್ವಾಮಿ ?

† ಶ್ರೀ ಎಂ. ವಿ. ರಾಮರಾವ್.—ಹನ್ನೆರಡಾಣೆ ಭತ್ಯ ಕೊಡುತ್ತಾರೆ ಎನ್ನುವುದರ ಮೇಲೆ ಸಾಕ್ಷಿಯ ಅರ್ಹತೆಯನ್ನು ನಿರ್ಣಯಿಸಿ ಅವರನ್ನು ಸಾಕ್ಷಿಯಾಗಿ ಕರೆಯುವುದಕ್ಕಾಗುವುದಿಲ್ಲ.

Sri G. V. GOWDA.—Sir, apart from this D. A., the rate of two repees subsitance allowance was paid in the Madras area. May I know whether that is continued now ?

ಶ್ರೀ ಎಂ. ವಿ. ರಾಮರಾವ್.—ಉತ್ತರದಲ್ಲಿಯೇ ಇದೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ಈಗ ಪ್ರಾಸಿಕ್ಯೂಷನ್ ಕಡೆ ಸಾಕ್ಷಿಗಳಾಗಿ ಬರತಕ್ಕವರು ಅವರ ಸಮಯಾವಕಾಶವನ್ನು ನೋಡಿದೆ ಪ್ರಾಸಿಕ್ಯೂಷನ್ನಿಗೆ ಸಹಾಯ ಮಾಡತಕ್ಕದ್ದರಲ್ಲಿ ಅವರ ಕೈಯಿಂದ ಖರ್ಚು ಮಾಡಬೇಕೆನ್ನುವುದು ಸರ್ಕಾರದ ಇಚ್ಛೆಯೇ ಸ್ವಾಮಿ ?

ಶ್ರೀ ಎಂ. ವಿ. ರಾಮರಾವ್.—ಸರ್ಕಾರರ ಇಚ್ಛೆಯೇನು ಆ ರೀತಿಯಿಲ್ಲ.

Sri G. V. GOWDA.—Sir, I wanted to know whether the subsistance allowance of Rs. 2 is continued ?

Sri M. V. RAMA RAO.—The reply given to part (b) of the question will make it clear Sir.

Sri G. V. GOWDA.—Who is to determine the status of a witness among non-officials ?

Sri M. V. RAMA RAO.—Hon'ble Member knows that it is the court that determines it.

ಶ್ರೀ ಎಸ್. ಗೋಪಾಲ ಸಾಲೆನ್ನ.—ಸರ್ಕಾರಿ ಅಧಿಕಾರಿಗಳು ಸಾಕ್ಷಿಗಳಾಗಿ ಬರುತ್ತಾರೆ. ಖಾನಗಿಯವರೂ ಬರುತ್ತಾರೆ. ಇವರಿಗೆ ಒಂದೇ ತರಹ ಭತ್ಯವನ್ನು ಕೊಡುತ್ತೀರಾ ಅಥವಾ ಏನಾದರೂ ತಾರತಮ್ಯ ಮಾಡುತ್ತೀರಾ ? ಹಾಗಿದ್ದರೆ ಏಕೆ ತಾರತಮ್ಯ ಮಾಡುತ್ತೀರಿ ?

ಶ್ರೀ ಎಂ. ವಿ. ರಾಮರಾವ್.—ತಾರತಮ್ಯ ಮಾಡಬೇಕೆಂಬ ಉದ್ದೇಶ ಇರುವುದಿಲ್ಲ. ಆದರೆ ಅಧಿಕಾರಿ ನೌಕರಿಯಲ್ಲರುವವರು ಸಾಕ್ಷಿಗಳಾಗಿ ಬಂದರೆ ಅವರ ಅಧಿಕಾರಕ್ಕೆ ಸಂಬಂಧಪಟ್ಟಂತೆ ಏನು ಭತ್ಯವನ್ನು ಕೊಡಬಹುದೋ ಅದಕ್ಕೆ ಅನ್ವಯಿಸುವ ಹಾಗೆ ಕೊಡುತ್ತಾರೆ. ಖಾನಗಿಯವರಿಗೆ ಯಾವ ರೀತಿ ಕೊಡಬೇಕು ಎನ್ನುವುದನ್ನು ರೂಲ್ಸ್‌ನಲ್ಲಿ ನಮೂದು ಮಾಡಿದ್ದೇವೆ.

Sri G. V. GOWDA.—Sir, if the subsistance allowance that was paid in Madras area is stopped, it affects the provision of the States Reorganisation Act, when you remove that right of the people getting Rs. 2 as subsistance allowance.

Sri M. V. RAMA RAO.—Sir, whether the provisions of the States Reorganisation Act have been controvened is a matter which cannot be decided here.

ಶ್ರೀ ಟಿ. ಡಿ. ದೇವೇಂದ್ರಪ್ಪ.—ದಿನ ಒಂದಕ್ಕೆ 75 ಪೈಸೆಯಿಂದ ಎರಡೂವರೆ ರೂಪಾಯವರೆಗೆ ಅವರವರ ಆಂತಸ್ತನ್ನನುಸರಿಸಿ ಕೊಡಲಾಗುವುದು ಎಂದು ತಿಳಿಸಿದೆ. ಸಾಕ್ಷಿ ಹೇಳಬೇಕಾದರೆ ಎಲ್ಲರೂ ಕೋರ್ಟಿನಲ್ಲಿ ಸೀಟಿನ ಮೇಲೆ ನಿಂತು ಹೇಳುವಾಗ ಅವರ ಸ್ಥಾನಮಾನಗಳನ್ನು ಅನುಸರಿಸಿ ಕೊಡಲಾಗುತ್ತದೆ ಎಂದರೆ ಅದರ ಅರ್ಥವೇನು ಸ್ವಾಮಿ ? ಅದನ್ನು ಹೇಗೆ ವರ್ಣನೆ ಮಾಡುತ್ತೀರಿ ?

ಶ್ರೀ ಎಂ. ವಿ. ರಾಮರಾವ್.—ಅದರ ವರ್ಣನೆಯನ್ನು ನಾವು ಮಾಡುವ ಅಗತ್ಯವೇನೂ ಇಲ್ಲ. ಕೋರ್ಟಿನಲ್ಲಿ ನಿರ್ಣಯಿಸುತ್ತಾರೆ.

ಶ್ರೀ ಸಿದ್ಧಯ್ಯ ಕಾಶಿಮಠ.—ರಾಜ್ಯದಲ್ಲಿ ಏಕರೂಪದ ಭತ್ಯವನ್ನು ಕೊಡುವುದಕ್ಕೆ ಸರ್ಕಾರ ಯೋಚಿಸುವುದೇ ಸ್ವಾಮಿ ?

ಶ್ರೀ ಎಂ. ವಿ. ರಾಮರಾವ್.—(ಬ) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ಈಗ ಹಾರಿಯಲ್ಲರುವುದನ್ನು ಹೇಳಿದೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಮಿನಿಮಂ ಭತ್ಯ 75 ಪೈಸೆ ಎಂದು ಹೇಳಿದ್ದಾರೆ. ಅದನ್ನು ಪುನರ್ವಿಮರ್ಶೆ ಮಾಡುವುದು ಸೂಕ್ತವಲ್ಲವೇ ಸ್ವಾಮಿ ?

ಶ್ರೀ ಎಂ. ವಿ. ರಾಮರಾವ್.—ಅದು ಮಾನ್ಯ ಸದಸ್ಯರ ಅಭಿಪ್ರಾಯ ಮತ್ತು ಸಲಹೆಯಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸ್ಥಾನಮಾನ ಎಂದರೆ ಅವರವರ ಅರ್ಹತೆಯೇ ಅಥವಾ ಯಾವ ಆಧಾರದ ಮೇಲೆ ತಾವು ಸಾಕ್ಷಿಯನ್ನು ವಿಂಗಡಣೆ ಮಾಡುತ್ತೀರಿ ?

Indicates that the remarks or speeches have not been revised by the member concerned.

ಶ್ರೀ ಎಂ. ವಿ. ರಾಮರಾವ್.—ಇಲ್ಲಿ ಅದನ್ನು ನಾವು ಮಾಡುವುದಿಲ್ಲ. ಕೋರ್ಟಿನಲ್ಲಿ ಅವರಿಗೆ ಕೊಡತಕ್ಕ ಧತ್ಯದ ವಿಷಯದಲ್ಲಿ ಏನಾದರೂ ಆಕ್ಷೇಪಣೆ ಇದ್ದರೆ ಅದನ್ನು ಸಾಕ್ಷಿ ಕೋರ್ಟಿನ ಮುಂದೆ ತಿಳಿಸಬೇಕು. ಅದರ ಮೇಲೆ ಕೋರ್ಟಿನವರು ಇತ್ಯರ್ಥ ಮಾಡುತ್ತಾರೆ.

ಅಧ್ಯಕ್ಷರು.—ಸಾಕ್ಷಿ ಶಿರಸ್ತೇದಾರರ ಮುಂದೆ ಹೋಗಿ, ನಾನು 600 ರೂಪಾಯಿ ತೀರ್ವೆಯನ್ನು ಕೊಡುತ್ತೇನೆ, ಹತ್ತು ಸಾವಿರ ರೂಪಾಯಿ ಇನ್‌ಕಂ ಟ್ಯಾಕ್ ಕೊಡುತ್ತೇನೆ ಎಂದು ಹೇಳುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಒಂದನೆ ಕ್ಲಾಸ್ ಮತ್ತು ನಾಲ್ಕನೇ ಕ್ಲಾಸ್ ಸಾಕ್ಷಿಗಳು ಹೇಳತಕ್ಕದ್ದು ಒಂದೇ ರೀತಿಯಾಗಿರುವುದರಿಂದ ಅಧಿಕಾರಿಗಳಿಗೆ ಹೆಚ್ಚು ಸಂಬಳವನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಧತ್ಯವನ್ನು ಕೊಡುವುದು, ಕಡಮೆ ಸಂಬಳವನ್ನು ತೆಗೆದುಕೊಳ್ಳುವವರಿಗೆ ಕಡಮೆ ಕೊಡತಕ್ಕದ್ದು, ಹಾಗೆ ಇಲ್ಲಿ ಮಾಡುವುದು ತಾರತಮ್ಯವಲ್ಲವೇ ಸ್ವಾಮಿ ?

ಶ್ರೀ ಎಂ. ವಿ. ರಾಮರಾವ್.—ಆ ವಿಧವಾದ ತರ್ಕ ಇದಕ್ಕೆ ಅನ್ವಯಿಸುವುದಿಲ್ಲ.

Strikes in the Industrial Undertakings.

*Q.—380. **Sri S. RAJAGOPAL** (K.G.F.).—

Will the Government be pleased to state :—

(*a*) the number of strikes by workmen since 1-1-1963 in the Industrial Undertakings in the State ;

(*b*) out of them the number of strikes that have been (i) declared as illegal, (ii) prohibited by the Government ?

A.—**Sri D. DEVARAJ URS** (Minister for Labour, Housing and Transport).—

(*a*) 70 during 1963 ; and 125 during 1964.

(*b*) No strike has been declared as illegal during the above period.

Four strikes were prohibited by Government during the period under section 10 (3) of the Industrial Disputes Act, 1947.

Sri S. RAJAGOPAL.—May I know which are these four strikes that have been prohobited by Government and the reasons for the same ?

† **Sri D. DEVARAJ URS.**—They are in Mysore Machinery Manufacturing Ltd. Bangalore ; Mysore Industrial and Testing Laboratory, Bangalore ; Vikram Industries and Metal-Malleable Manufacture, Bangalore.

The reasons for prohibiting the strikes are notified in the Government Order issued by Government. The G.O. clearly states why it is done.

Sri S. RAJAGOPAL.—In answer to (*b*) it is said that no strike has been declared as illegal. Does it mean to say that all the strikes that took place during this period are legal ?

Mr. SPEAKER.—It does not follow from that.

Sri D. DEVARAJ URS.—Government does not declare a strike legal or illegal. Whether the strike is legal or illegal depends on the Act itself. When the strike is illegal under the Act, the question of prosecuting them will arise. The strike may be legal ; still we prohibit.